All India Radio: Bangalore
National Bulletin In Kannada
10.05.2025 : 1310hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

10.05.2025 : 1310hrs

*****

ಮುಖ್ಯಾಂಶಗಳು :

1. ಪಾಕಿಸ್ತಾನದ ಮಿಲಿಟರಿ ತಾಂತ್ರಿಕ ಮೂಲಸೌಕರ್ಯಗಳ ಮೇಲೆ ಭಾರತದಿಂದ ನಿಖರ ದಾಳಿ
2. ಯಾವುದೇ ದಾಳಿಗೆ ಭಾರತೀಯ ಸಶಸ್ತ್ರ ಪಡೆಗಳು ಸನ್ನದ್ಧ - ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್
3. ಜನರ ದಾರಿ ತಪ್ಪಿಸಲು ಪಾಕಿಸ್ತಾನದಿಂದ ಸುಳ್ಳು ಸುದ್ದಿ ಹರಡುವ ತಂತ್ರ - ವದಂತಿ ಕುರಿತು ಜಾಗೃತರಾಗುವಂತೆ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಸಲಹೆ
4. ಭಾರತೀಯ ಸೇನೆಯಿಂದ ಪಾಕಿಸ್ತಾನಿ ನೆಲೆ, ಭಯೋತ್ಪಾದಕ ಉಡಾವಣಾ ವಾಹಕಗಳ ನಾಶ

************

ಪಾಕಿಸ್ತಾನದ ಪ್ರಚೋದನಾಕಾರಿ ಕ್ರಮಗಳಿಗೆ ಪ್ರತಿಕಾರವಾಗಿ ಭಾರತೀಯ ಸಶಸ್ತ್ರ ಪಡೆಗಳು ತಾಂತ್ರಿಕ ಮೂಲಸೌಕರ್ಯ, ನಿರ್ದೇಶನ ಮತ್ತು ನಿಯಂತ್ರಣ ಕೇಂದ್ರ ರಾಡಾರ್ ಮತ್ತು ಶಸ್ತ್ರಾಸ್ತ್ರ ಸಂಗ್ರಹಣ ತಾಣಗಳು ಸೇರಿದಂತೆ ಪಾಕಿಸ್ತಾನದ ಮಿಲಿಟರಿ ಗುರಿಗಳ ಮೇಲೆ ನಿಖರ ದಾಳಿ ನಡೆಸಿವೆ. ರಫೀಕಿ, ಮುರಿದ್, ಚಕ್ಲಾಲಾ, ರಹಿಮ್ಯಾರ್ ಖಾನ್ ಸೇರಿದಂತೆ ಹಲವು ಪ್ರದೇಶಗಳನ್ನು ಗುರಿಯಾಗಿಸಿ ಭಾರತೀಯ ಯುದ್ಧ ವಿಮಾನಗಳು ವೈಮಾನಿಕ ದಾಳಿ ನಡೆಸಿವೆ. ನವದೆಹಲಿಯಲ್ಲಿಂದು ಆಪರೇಷನ್ ಸಿಂದೂರ್ ಕುರಿತ ವಿಶೇಷ ಸುದ್ದಿಗೋಷ್ಠಿಯಲ್ಲಿ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್, ಸಶಸ್ತ್ರ ಪಡೆಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಿದರು. ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುವ ಉದ್ದೇಶದಿಂದ ಪಾಕಿಸ್ತಾನಿ ಸೇನೆ ತನ್ನ ಪಡೆಗಳನ್ನು ಮತ್ತಷ್ಟು ನಿಯೋಜಿಸುತ್ತಿರುವುದನ್ನು ಗಮನಿಸಲಾಗಿದೆ. ಭಾರತೀಯ ಸಶಸ್ತ್ರ ಪಡೆಗಳು ಕಾರ್ಯಾಚರಣೆಗೆ ಸನ್ನದ್ಧ ಸ್ಥಿತಿಯಲ್ಲಿದೆ ಹಾಗೂ ಈವರೆಗಿನ ಎಲ್ಲಾ ಎದುರಾಳಿ ದಾಳಿಯನ್ನು ಪರಿಣಾಮಕಾರಿಯಾಗಿ ಎದುರಿಸಲಾಗಿದೆ ಎಂದರು. ಪಸೂರ್ ಮತ್ತು ಸೈಲ್‌ಕೋಟ್ ವಾಯುನೆಲೆಯಲ್ಲಿರುವ ರಾಡಾರ್ ತಾಣಗಳನ್ನು ಗುರಿಯಾಗಿಸಲಾಗಿತ್ತು. ಪಾಕಿಸ್ತಾನದ ಕ್ರಮಕ್ಕೆ ಪ್ರತಿಯಾಗಿ ಭಾರತೀಯ ಸೇನೆ

ಎದುರಾಳಿ ಮಿಲಿಟರಿ ಗುರಿಗಳನ್ನು ಪತ್ತೆಹಚ್ಚಿ ನಿಖರ ಪ್ರತಿದಾಳಿ ನಡೆಸಿದೆ ಎಂದು ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಮಾಹಿತಿ ನೀಡಿದರು.

****ಧ್ವನಿ**** ವ್ಯೋಮಿಕಾ ಸಿಂಗ್

ಬಳಿಕ ಮಾತನಾಡಿದ ಕರ್ನಲ್ ಸೋಫಿಯಾ ಖುರೇಶಿ, ಕಳೆದ ರಾತ್ರಿ ಪಂಜಾಬ್‌ನ ವಾಯುನೆಲೆಯನ್ನು ಗುರಿಯಾಗಿಸಿ ಪಾಕಿಸ್ತಾನ ಅತಿ ವೇಗದ ಕ್ಷಿಪಣಿ ದಾಳಿ ನಡೆಸಿದ್ದು, ಇದರ ಜೊತೆಗೆ ಶ್ರೀನಗರ, ಆವಂತಿಪುರ ಮತ್ತು ಉಧಂಪುರದಲ್ಲಿ ಆರೋಗ್ಯ ಸೌಲಭ್ಯಗಳು ಮತ್ತು ಶಾಲೆಗಳ ಮೇಲೆ ದಾಳಿ ನಡೆಸಲಾಗಿದೆ.  ಎದುರಾಳಿ ಪಡೆಯಿಂದ ಸೂಕ್ತ ಪ್ರತಿಕ್ರಿಯೆ ದೊರೆತರೆ ಭಾರತದ ಸಶಸ್ತ್ರ ಪಡೆಗಳು ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸದಿರಲು ಬದ್ಧವಾಗಿವೆ ಎಂದು ತಿಳಿಸಿದ್ದಾರೆ. ನಂತರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ಭಾರತದ ನಿರ್ಣಾಯಕ ಮೂಲಸೌಕರ್ಯಗಳು, ಸೈಬರ್ ವ್ಯವಸ್ಥೆಗಳು, ವಿದ್ಯುತ್ ವ್ಯವಸ್ಥೆಗಳಿಗೆ ದಾಳಿ ನಡೆಸಿ, ಸಂಪೂರ್ಣವಾಗಿ ನಾಶ ಮಾಡಲಾಗಿದೆ ಎಂಬ ಪಾಕಿಸ್ತಾನದ ವರದಿಗಳು ಸತ್ಯಕ್ಕೆ ಸಂಪೂರ್ಣವಾಗಿ ದೂರವಾಗಿದೆ. ಪಾಕಿಸ್ತಾನ ಉದ್ದೇಶಪೂರ್ವಕವಾಗಿ ಹರಡುತ್ತಿರುವ ಇಂತಹ ವದಂತಿಗಳನ್ನು ನಂಬಿ ಯಾರು ದಾರಿ ತಪ್ಪಬೇಡಿ ಎಂದರು.

****ಧ್ವನಿ ಮಿಕ್ರಮ್ ಮಿಸ್ರಿ****

************

ಸಂಶಯಾಸ್ಪದ ವಿಷಯ, ವಿಶೇಷವಾಗಿ ಭಾರತೀಯ ಸಶಸ್ತ್ರ ಪಡೆಗಳ ಬಗ್ಗೆ ಅಥವಾ ಭಾರತ-ಪಾಕಿಸ್ತಾನದ ನಡುವಿನ ಉದ್ವಿಗ್ನ ಪರಿಸ್ಥಿತಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಸತ್ಯಾಸತ್ಯತೆ ಸಂಶಯವಿದ್ದಲ್ಲಿ ಅದನ್ನು ಪಿಐಬಿ ಫ್ಯಾಕ್ಟ್ ಚೆಕ್‌ಗೆ ವರದಿ ಮಾಡಬಹುದು. ಅಂತಹ ವಿಷಯವನ್ನು ವಾಟ್ಸಆಪ್ ಸಂಖ್ಯೆ **87997101259** ಮತ್ತು ಇಮೇಲ್-**Socialmedia@pib.gov.in** ನಲ್ಲಿ ಹಂಚಿಕೊಳ್ಳಬಹುದು.

************

ಈ ನಡುವೆ ಬಾರಾಮುಲ್ಲಾದಿಂದ ಭುಜ್‌ವರೆಗಿನ ಅಂತಾರಾಷ್ಟ್ರೀಯ ಗಡಿ ಮತ್ತು ನಿಯಂತ್ರಣರೇಖೆ ಬಳಿ ೨೬ ಸ್ಥಳಗಳಲ್ಲಿ ಕಾಣಿಸಿಕೊಂಡ ಡ್ರೋನ್ ದಾಳಿ ಪ್ರಯತ್ನಗಳನ್ನು ವಿಫಲಗೊಳಿಸುವಲ್ಲಿ ಭಾರತೀಯ ರಕ್ಷಣಾ ಪಡೆಗಳು ಯಶಸ್ವಿಯಾಗಿವೆ. ಈ ಡ್ರೋನ್‌ಗಳು ನಾಗರಿಕರು ಮತ್ತು ಮಿಲಿಟರಿ ಗುರಿಗಳಿಗೆ ಸಂಭಾವ್ಯ ಬೆದರಿಕೆಯನ್ನುಂಟು ಮಾಡುವ ಶಂಕಿತ ಸಶಸ್ತ್ರ ಡ್ರೋನ್‌ಗಳನ್ನು

ಒಳಗೊಂಡಿವೆ. ರಕ್ಷಣಾ ಮೂಲಗಳ ಪ್ರಕಾರ, ಬಾರಾಮುಲ್ಲಾ, ಶ್ರೀನಗರ, ಅವಂತಿಪೋರಾ, ನಾಗ್ರೋಟಾ, ಜಮ್ಮು, ಫಿರೋಜ್‌ಪುರ, ಪಠಾಣ್‌ಕೋಟ್, ಫಜಿಲ್ಕಾ, ಲಾಲ್‌ಗಢ್ ಜಟ್ಟಾ, ಜೈಸಲ್ಮೇರ್, ಬಾರ್ಮರ್, ಭುಜ್, ಕುವಾರ್ಬೆಟ್ ಮತ್ತು ಲಖಿ ನಲಾದಲ್ಲಿ ಡ್ರೋನ್‌ಗಳು ಪತ್ತೆಯಾಗಿದ್ದವು.

## ಈ ಕುರಿತು ಒಂದು ವರದಿ

ಭಾರತೀಯ ಸಶಸ್ತ್ರ ಪಡೆಗಳು ಹೆಚ್ಚಿನ ಜಾಗರೂಕತೆಯನ್ನು ಕಾಯ್ದುಕೊಂಡಿವೆ ಮತ್ತು ಡ್ರೋನ್ ಸೇರಿದಂತೆ ಎಲ್ಲಾ ರೀತಿಯ ವೈಮಾನಿಕ ಬೆದರಿಕೆಗಳನ್ನು ಪ್ರತಿ-ಡ್ರೋನ್ ವ್ಯವಸ್ಥೆಗಳನ್ನು ಬಳಸಿಕೊಂಡು ಪತ್ತೆಹಚ್ಚಲಾಗುತ್ತಿದೆ. ಪರಿಸ್ಥಿತಿಯನ್ನು ನಿರಂತರ ಕಣ್ಗಾವಲಿನಲ್ಲಿ ಇರಿಸಲಾಗಿದೆ ಮತ್ತು ಅಗತ್ಯವಿರುವಲ್ಲಿ ತ್ವರಿತ ಕ್ರಮ ಕೈಗೊಳ್ಳಲಾಗುತ್ತಿದೆ. ಗಡಿ ಪ್ರದೇಶಗಳಲ್ಲಿ ವಾಸಿಸುವ ನಾಗರಿಕರಿಗೆ ಮನೆಗಳಿಂದ ಹೊರಬರದಂತೆ ಅಥವಾ ಅನಗತ್ಯ ಓಡಾಟ ಮಿತಿಗೊಳಿಸಲು ಮತ್ತು ಸ್ಥಳೀಯ ಅಧಿಕಾರಿಗಳು ನೀಡುವ ಸುರಕ್ಷತಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.ಫಿರೋಜ್‌ಪುರ, ಅಮೃತಸರ ಮತ್ತು ಪಠಾಣ್‌ಕೋಟ್ ಸೇರಿದಂತೆ ಪಂಜಾಬ್‌ನ ಗಡಿ ಜಿಲ್ಲೆಗಳ ಮೇಲೆ ದಾಳಿ ಮಾಡಲು ಸಶಸ್ತ್ರ ಡ್ರೋನ್‌ಗಳು ಪ್ರಯತ್ನಿಸಿದವು, ಆದರೆ ಭಾರತೀಯ ರಕ್ಷಣಾ ಪಡೆಗಳು ಆ ಪ್ರಯತ್ನಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿ ವಿಫಲಗೊಳಿಸಿದವು. ಆದಾಗ್ಯೂ, ಫಿರೋಜ್‌ಪುರದಲ್ಲಿ, ಒಂದು ಮನೆಗೆ ಹಾನಿಯಾಗಿದೆ ಮತ್ತು ದಾಳಿಯಿಂದಾಗಿ ಮೂವರು ಕುಟುಂಬ ಸದಸ್ಯರು ಗಾಯಗೊಂಡಿದ್ದಾರೆ. ಅವರಿಗೆ ಸುಟ್ಟ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವರದಿಯಾಗಿದೆ. ಫಿರೋಜ್‌ಪುರ ಪೊಲೀಸ್ ಮುಖ್ಯಸ್ಥ ಭೂಪಿಂದರ್ ಸಿಂಗ್ ಸಿಧು ಅವರ ಪ್ರಕಾರ, ಇದು ಒಂದು ಪ್ರತ್ಯೇಕ ಘಟನೆಯಾಗಿದ್ದು, ಹೆಚ್ಚಿನ ದಾಳಿಗಳನ್ನು ಸೇನೆಯು ಪರಿಣಾಮಕಾರಿಯಾಗಿ ಎದುರಿಸಿದೆ. ಈ ನಡುವೆ, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಈ ತಿಂಗಳ ೧೪ರ ವರೆಗೆ ಉತ್ತರ ಮತ್ತು ಪಶ್ಚಿಮ ಭಾರತದಾದ್ಯಂತ ೩೨ ವಿಮಾನ ನಿಲ್ದಾಣಗಳನ್ನು ಎಲ್ಲಾ ನಾಗರಿಕ ವಿಮಾನ ಕಾರ್ಯಾಚರಣೆಗಳಿಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದಾಗಿ ಘೋಷಿಸಿದೆ. ಅಮೃತ್‌ಸರ್, ಚಂಡಿಗಢ, ಜಮ್ಮು, ಶ್ರೀನಗರ, ಭುಜ್, ಜಾಮ್‌ನಗರ್, ಜೈಸಲ್ಮೇರ್, ಪಠಾಣ್‌ಕೋಟ್ ಸೇರಿದಂತೆ ಒಟ್ಟು ೩೨ ವಿಮಾನ ನಿಲ್ದಾಣಗಳ ಕಾರ್ಯಾಚರಣೆ ಮೇಲೆ ನಿರ್ಬಂಧ ತರಲಾಗಿದೆ.

************

ಭಾರತೀಯ ಸೇನೆಯಿಂದ ಪಾಕಿಸ್ತಾನಿ ನೆಲೆಗಳು ಮತ್ತು ಡ್ರೋನ್‌ಗಳನ್ನು ಹಾರಿಸಲಾಗುತ್ತಿದ್ದ ಭಯೋತ್ಪಾದಕ ಉಡಾವಣಾ ವಾಹಕಗಳನ್ನು ನಾಶಪಡಿಸಿದೆ. ಇಂದು ಬೆಳಗ್ಗೆ ೫ ಗಂಟೆ ಸುಮಾರಿಗೆ ಅಮೃತ್‌ಸರದ ಖಾಸಾ ಬಳಿ ಹಾರಾಟ ನಡೆಸುತ್ತಿದ್ದ ಎದುರಾಳಿ ಶಸ್ತ್ರ ಸಜ್ಜಿತ ಡ್ರೋನ್‌ಗಳನ್ನು ಭಾರತೀಯ ಸೇನೆ ತಕ್ಷಣವೇ ಗುರುತಿಸಿ, ನಾಶಪಡಿಸಿದೆ. ಭಾರತದ ಪಶ್ಚಿಮ ಗಡಿಗಳಲ್ಲಿ ಪಾಕಿಸ್ತಾನದಿಂದ ಡ್ರೋನ್ ದಾಳಿ ಮತ್ತು ಇತರ ಯುದ್ಧ ಸಾಮಗ್ರಿಗಳೊಂದಿಗೆ ದಾಳಿ ಮುಂದುವರಿದಿದೆ. ಭಾರತದ ಸಾರ್ವಭೌಮತ್ವವನ್ನು ಉಲ್ಲಂಘಿಸಲು ಮತ್ತು ನಾಗರಿಕರನ್ನು ಅಪಾಯಕ್ಕೆ ಸಿಲುಕಿಸಲು ಕೈಗೊಳ್ಳಲಾಗುತ್ತಿರುವ ಪಾಕಿಸ್ತಾನದ ಸ್ಪಷ್ಟ ಪ್ರಯತ್ನ ಸ್ವೀಕಾರಾರ್ಹವಲ್ಲ ಎಂದು ಭಾರತೀಯ ಸೇನೆ ತಿಳಿಸಿದೆ. ಈತನ್ಮಧ್ಯೆ, ಕಳೆದ ರಾತ್ರಿ ಪಾಕಿಸ್ತಾನ ೯ ಗಂಟೆ ಸುಮಾರಿಗೆ ಜಮ್ಮು ವಲಯದ ಬಿಎಸ್‌ಎಫ್ ನೆಲೆಗಳ ಮೇಲೆ ಅಪ್ರಚೋದಿತ ಗುಂಡಿನ ದಾಳಿ ನಡೆಸಿದೆ ಎಂದು ಗಡಿ ಭದ್ರತಾ ಪಡೆ ಬಿಎಸ್‌ಎಫ್ ತಿಳಿಸಿದೆ. ಅಂತಾರಾಷ್ಟ್ರೀಯ ಗಡಿ ಉದ್ದಕ್ಕೂ ಪಾಕಿಸ್ತಾನಿ ರೇಂಜರ್‌ಗಳ ನೆಲೆಗಳು ಮತ್ತು ಆಸ್ತಿಗಳಿಗೆ ವ್ಯಾಪಕ ಹಾನಿ ಉಂಟುಮಾಡುವ ರೀತಿಯಲ್ಲಿ ಪ್ರತಿಕ್ರಿಯಿಸಲಾಗುತ್ತಿದೆ ಎಂದು ಬಿಎಸ್‌ಎಫ್ ತಿಳಿಸಿದೆ. ಪಾಕಿಸ್ತಾನದ ಅಖ್ನೂರ್ ಪ್ರದೇಶದ ಎದುರಿನ ಸಿಯಾಲ್‌ಕೋಟ್ ಜಿಲ್ಲೆಯ ಲೂನಿಯಲ್ಲಿರುವ ಭಯೋತ್ಪಾದಕ ಲಾಂಚ್‌ಪ್ಯಾಡ್‌ಅನ್ನು ಸಂಪೂರ್ಣವಾಗಿ ನಾಶಪಡಿಸಿದೆ.

************

ಪಾಕಿಸ್ತಾನಕ್ಕೆ ಹೊಸದಾಗಿ ಆರ್ಥಿಕ ನೆರವು ಒದಗಿಸುವ ಕುರಿತಂತೆ ನಡೆದ ಅಂತಾರಾಷ್ಟ್ರೀಯ ಹಣಕಾಸು ನಿಧಿ - ಐಎಂಎಫ್ ಮಂಡಳಿ ಸಭೆಯಲ್ಲಿ ಮತ ಚಲಾಯಿಸುವುದರಿಂದ ಭಾರತ ದೂರ ಉಳಿದಿದೆ. ಈ ಕುರಿತಂತೆ ಭಾರತದ ಹೇಳಿಕೆಯನ್ನು ಐಎಂಎಫ್ ಸ್ವೀಕರಿಸಿದೆ. ಪಾಕಿಸ್ತಾನದ ಹಿಂದಿನ ಆರ್ಥಿಕ ದಾಖಲೆಯನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಐಎಂಎಫ್ ಕಾರ್ಯಕ್ರಮಗಳ ಪರಿಣಾಮಕಾರಿತ್ವವನ್ನು ಭಾರತ ಪ್ರಶ್ನಿಸಿದೆ. ಇದರ ಜೊತೆಗೆ ಐಎಂಎಫ್ ನೀಡುವ ಧನ ಸಹಾಯವನ್ನು ಪಾಕಿಸ್ತಾನ ಗಡಿಯಾಚೆಗಿನ ಭಯೋತ್ಪಾದನೆಗೆ ಬಳಸುವ ಸಾಧ್ಯತೆಗಳ ಬಗ್ಗೆ ಆತಂಕವ್ಯಕ್ತಪಡಿಸಿದೆ. ಐಎಂಎಫ್ ನಿನ್ನೆ ಪಾಕಿಸ್ತಾನಕ್ಕೆ ನೀಡಲಾಗುತ್ತಿರುವ ಒಂದು ಶತಕೋಟಿ ಡಾಲರ್ ವಿಸ್ತರಿತ ನಿಧಿ ಸೌಲಭ್ಯ ಮತ್ತು ೧.೩ ಶತಕೋಟಿ ಡಾಲರ್ ಸ್ಥಿರತೆ ಮತ್ತು ಸುಸ್ಥಿರತೆ ಸೌಲಭ್ಯ ಕುರಿತಂತೆ ಪರಿಶೀಲನೆ ನಡೆಸಿತು. ಸಭೆಯಲ್ಲಿ ಭಾರತ ಸ್ಪಷ್ಟ ಹೇಳಿಕೆ ನೀಡಿದ್ದು, ಗಡಿಯಾಚೆಗಿನ ಭಯೋತ್ಪಾದನೆಗೆ ನಿರಂತರ ಬೆಂಬಲ ನೀಡುವ ದೇಶಕ್ಕೆ ಮರಳಿ ಆರ್ಥಿಕ ನೆರವು ನೀಡುವುದು ಅಂತಾರಾಷ್ಟ್ರೀಯ ಸಮುದಾಯಕ್ಕೆ ಅಪಾಯಕಾರಿ ಸಂದೇಶ ನೀಡುತ್ತದೆ. ಇದರಿಂದ ಜಾಗತಿಕ ಮೌಲ್ಯಗಳಿಗೆ ಅವಮಾನವಾಗುವ ಜೊತೆಗೆ ಹಣಕಾಸು ಸಂಸ್ಥೆಗಳು ಹಾಗೂ ದಾನಿಗಳಿಗೆ ಅಗೌರವ

ತೋರಿದಂತಾಗುತ್ತದೆ ಎಂದಿದೆ.ದೀರ್ಘಕಾಲದಿಂದ ಐಎಂಎಫ್‌ನಿಂದ ನೆರವು ಪಡೆಯುತ್ತಿರುವ ಪಾಕಿಸ್ತಾನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತರಲು ವಿಫಲವಾಗಿದೆ. ಕಳೆದ ೫ ವರ್ಷಗಳಲ್ಲಿ ಐಎಂಎಫ್, ಪಾಕಿಸ್ತಾನದಲ್ಲಿ ನಾಲ್ಕು ಕಾರ್ಯಕ್ರಮಗಳನ್ನು ಜಾರಿಗೊಳಿಸಿದರೂ ಪ್ರಯೋಜನವಾಗಿಲ್ಲ ಎಂದು ಭಾರತ ಅಭಿಪ್ರಾಯಪಟ್ಟಿದೆ.

***************END****************